

## ಫೇಸ್ ಪ್ಯಾಕ್!

**ಕ**ಳೆದ ಎರಡೂವರೆ ವರ್ಷಗಳಿಂದ ಪಕ್ಷದಲ್ಲಿ ಮತ್ತು ಪಕ್ಷದ ಹೊರಗೆ (ರೆಸಾರ್ಟ್‌ನಲ್ಲಿ) ನಡೆದ ಭಿನ್ನ ಮತ್ತು ಭಿನ್ನಮತೀಯ ಚಟುವಟಿಕೆಗಳಿಂದ ಖಿನ್ನಮತೀಯರಾಗಿರುವ ಮುಖ್ಯಮಂತ್ರಿ ಎವರೆಡಿಯೂರಪ್ಪ ಅವರಿಗೆ ಈಗ ಹೊಸ ಇಮೇಜ್ ಒದಗಿಸುವ ಕೆಲಸ ಭರದಿಂದ ಆರಂಭವಾಗಿದೆ. ಇದರ ಮೊದಲ ಹಂತವಾಗಿ ನಡೆದದ್ದು ಆಪರೇಷನ್ ಫೇಸ್‌ಪ್ಯಾಕ್. 'ನಾಗರಹಾವು' ಗೆಟಪ್‌ನಲ್ಲಿ ವಿರೋಧ ಪಕ್ಷಗಳನ್ನು ಬಗ್ಗುಬಡಿಯಲು ಮುಖ್ಯಮಂತ್ರಿಯವರನ್ನು ಸಿದ್ಧಗೊಳಿಸಿರುವ ಅಪರೂಪದ ಎಕ್ಸ್‌ಕ್ಲೂಸಿವ್ ಫೋಟೊ ನಮಗೆ ಸಿಕ್ಕಿದೆ.




## ಹಾಲಿವುಡ್‌ಗೆ ಎಚ್‌ಡಿಕೆ?

**ಮಾ**ಜಿ ಸೀಎಂ ಕುಮಾರಸ್ವಾಮಿಯವರು ರಾಜಕೀಯದಿಂದ ಬಿಡುವು ಸಿಕ್ಕಿದಾಗೆಲ್ಲ ಹೊಸ ಸಿನಿಮಾಗೆ ಕಥೆ ಹುಡುಕುತ್ತಿದ್ದಾರಂತೆ. ಹೊಸ ಸಿನಿಮಾ ನಿರ್ಮಾಣಕ್ಕೆ ಮುನ್ನ ಕಥೆಯನ್ನು ತಾವೇ ಓಕೆ ಮಾಡಬೇಕು ಎನ್ನುವುದು ಅವರ ಇರಾದೆ. ಅದಕ್ಕೇ ಈಗ ಇಂಗ್ಲಿಷ್ ಲೇಖಕರನ್ನೆಲ್ಲ ನೈಸಾಗಿ ಕುಳಿತು ಓದುತ್ತಿದ್ದಾರೆ! ಕಥೆ ಚೆನ್ನಾಗಿದ್ದರೆ ಹಾಲಿವುಡ್ ಲೆವೆಲಲ್ಲೇ ಸಿನಿಮಾ ನಿರ್ಮಿಸಲೂ ಅವರು ಸಿದ್ಧರಿದ್ದಾರಂತೆ!

## ಕುರ್ಚಿ ಬಂಧಾಸನ

ಪ್ರಧಾನ ಮಂತ್ರಿಯ ಕುರ್ಚಿಯಲ್ಲಿ ಅಲ್ಲಾಡದಂತೆ ಕುಳಿತುಕೊಳ್ಳುವುದೂ ಒಂದು ಯೋಗವಿದ್ಯೆಯೇ. ಹಿಂದೆ ಚಂದ್ರಶೇಖರ್‌ಜೀಗೆ ಚಂದ್ರಾ ಸ್ವಾಮಿ ಸರಿಯಾಗಿ ಯೋಗ ಕಲಿಸಿಕೊಡದ್ದರಿಂದ ಅವರು ಕುರ್ಚಿ ಕಳೆದುಕೊಂಡರು. ಆಡ್ವಾಣೀಜಿ ಎಷ್ಟೆಲ್ಲ ಯೋಗ ಮಾಡಿದರೂ ಅವರಿಗೆ ಆ ಕುರ್ಚಿ ಏರುವ ಯೋಗವೇ ಬರಲಿಲ್ಲ. ಈಗ ಕುರ್ಚಿಯಲ್ಲಿರುವ ಸಿಂಗ್‌ಜೀಯವರು ಕುರ್ಚಿ ಮುಂದಿನ ಹತ್ತು ವರ್ಷಗಳ ಕಾಲ ಅಲ್ಲಾಡದಂತೆ ಹೊಸ ಕುರ್ಚಿ ಬಂಧಾಸನ ಎಂಬ ಯೋಗಾಸನವನ್ನು ಕಲಿಯುತ್ತಿದ್ದಾರೆ. 'ರಾ'ದವರ ಕಣ್ಣು ತಪ್ಪಿಸಿ ತೆಗೆದಿರುವ ಈ ರಾ ಫೋಟೋ ಎಕ್ಸ್‌ಕ್ಲೂಸಿವ್!





## ಇಸ್ಮಾಯಿಲ್ ಪ್ಲೀಸ್!

**ಕೆ**ಎಂಎಫ್ ಅಧ್ಯಕ್ಷಗಿರಿಯೂ ಸಿಗದೆ, ರಾಷ್ಟ್ರೀಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಹುದ್ದೆಯೂ ಸಿಗದೆ ನಿರಾಶರಾದ ಸದ್ದಾನಂದ ಗೌಡ್ರು ಮೊನ್ನೆ ಮನೆಯಲ್ಲಿ ತಣ್ಣಗೆ ಕುಳಿತಿದ್ದರು. ಆಗ ಏಕಾಏಕಿ ಪ್ರವೇಶಿಸಿದ ನಮ್ಮ ಛಾಯಾಗ್ರಾಹಕ ಚಿಣ್‌ಮಿಣ್ಕಪ್ಪ ಫೋಟೋ ತೆಗೆದರು. ತಕ್ಷಣ ಗೌಡ್ರು ನಕ್ಕರಂತೆ. ಆದರೆ ಅರ್ಜೆಂಟಲ್ಲಿ ಹಲ್ಲಿನ ಸೆಟ್ ಇಟ್ಟುಕೊಳ್ಳಲು ಆಗಿಲ್ಲ! ಇದೇ ಮೊದಲ ಬಾರಿಗೆ ಗೌಡರ ಬಿನಾಕಾ ಇಸ್ಮಾಯಿಲ್ ಹಲ್ಲುಗಳ ಗುಟ್ಟು ಇಲ್ಲಿ ರಟ್ಟಾಗಿದೆ!

## ಯಾ..ಹೂ!



**ಮಂ**ತ್ರಿಮಂಡಲದಲ್ಲಿ ಇದ್ದ ಏಕೈಕ ಹೆಣ್ಣುಮಗಳನ್ನು ರಾಜೀನಾಮೆ ಕೊಡಿಸಿದರು. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮಾಡುತ್ತೇವೆಂದವರು ಅಲ್ಲಿಯೂ ಕೈಕೊಟ್ಟರು. ವಿಧಾನಸಭೆಯಲ್ಲಿ ಇನ್ನು ಮುಂದೆ ಕೇವಲ ಬಾಯಿಮಾತಿನ ಟೀಕಾ ಪ್ರಕಾರ ಮಾಡಿದರೆ ಸಾಲದು; ಕೈ ರುಚಿಯನ್ನೂ ತೋರಿಸಬೇಕು ಎಂದು ಶೋಭಕ್ಕ ನಿರ್ಧಾರ ಮಾಡಿದ್ದಾರಂತೆ! ಅದಕ್ಕೆಂದೇ ಈ ಪ್ರಾಕ್ಟೀಸ್. ಅಂದ ಹಾಗೆ ಇದು ಕರಾಟೆ ಅಲ್ಲ; ಬೆಳ್ತಂಗಡಿ- ಕೇರಳ ಗಡಿಯಲ್ಲಿ ವಿಶೇಷವಾಗಿ ಜನಪ್ರಿಯವಾಗಿರುವ ಕಳರಿಪಯಟ್ ಅಂತೆ!